# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ : ಬೆಂಗಳೂರು

## ಪತ್ರಿಕಾ ಪ್ರಕಟಣೆ

**ವಿಷಯ: ಕೆಎಸ್‌ಆರ್‌ಟಿಸಿಗೆ ಪತಿಷ್ಠಿತ Business World Smart Cities ಪ್ರಶಸ್ತಿ–2016**

********

**ದಿನಾಂಕ 21ನೇ ಡಿಸೆಂಬರ್ ನವದೆಹಲಿ:** ಕೆಎಸ್‌ಆರ್‌ಟಿಸಿಯ **Intelligent Transport System (ಜಾಣ ಸಾರಿಗೆ ವ್ಯವಸ್ಥೆ) ಮೊಬೈಲ್ ಆಪ್ ಉಪಕ್ರಮಕ್ಕೆ ಪ್ರತಿಷ್ಠಿತ** Business World Smart Cities ಪ್ರಶಸ್ತಿ–2016 Accessibility & Mobility ವರ್ಗದಲ್ಲಿ ಲಭಿಸಿರುತ್ತದೆ.

**Intelligent Transport System (ಜಾಣ ಸಾರಿಗೆ ವ್ಯವಸ್ಥೆ) ಮತ್ತು ಮೊಬೈಲ್ ಆಪ್:** ದೇಶದ ಪ್ರಪ್ರಥಮ ಜಾಣ ಸಾರಿಗೆ ವ್ಯವಸ್ಥೆಯನ್ನು ವಿಶ್ವ ಬ್ಯಾಂಕ್ ಸಹಯೋಗದೊಂದಿಗೆ ಕೆಎಸ್‌ಆರ್‌ಟಿಸಿಯು ಮೈಸೂರು ನಗರದ 500 ಬಸ್ಸುಗಳಲ್ಲಿ, 105 ಬಸ್ ನಿಲ್ದಾಣಗಳು, 45 ಪ್ಲಾಟ್‌ಫಾರಂಗಳು ಹಾಗೂ 6 ಬಸ್ ಟರ್ಮಿನಲ್‌ಗಳಲ್ಲಿ ಅಳವಡಿಸಿದೆ. Intelligent Transport System ವ್ಯವಸ್ಥೆಯು ವಾಹನದ ಮಾಹಿತಿ ವ್ಯವಸ್ಥೆ, ಪ್ರಯಾಣಿಕರಿಗೆ ನೈಜ ಸಮಯದ ಮಾಹಿತಿ ಮತ್ತು ಕೇಂದ್ರೀಯ ನಿಯಂತ್ರಣ ಕೇಂದ್ರದ ಸೌಲಭ್ಯಗಳನ್ನು ಒದಗಿಸುವ ಯೋಜನೆಯಾಗಿದ್ದು, ಪ್ರಯಾಣಿಕರಿಗೆ ವಾಹನ ಮಾಹಿತಿ, ಸಂವಹನ ವ್ಯವಸ್ಥೆ, ಜಿಪಿಎಸ್ ಆಧಾರಿತ ಬಸ್ಸುಗಳ ಆಗಮನ ಮತ್ತು ನಿರ್ಗಮನ ಮಾಹಿತಿಯನ್ನು ಒದಗಿಸುವುದಾಗಿದೆ.



**ಶ್ರೀ.ರಾಮಲಿಂಗಾ ರೆಡ್ಡಿ, ಸನ್ಮಾನ್ಯ ಸಾರಿಗೆ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಕೆಎಸ್‌ಆರ್‌ಟಿಸಿ ಮತ್ತು ಶ್ರೀ.ರಾಜೇಂದರ್ ಕುಮಾರ ಕಟಾರಿಯಾ ಭಾಆಸೇ, ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಆರ್‌ಟಿಸಿರವರಿಗೆ ದಿ ತಾಜ್ ಪ್ಯಾಲೇಸ್ ಹೋಟೆಲ್ ನವದೆಹಲಿಯಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶ್ರೀ. ಮನೋಜ್ ಸಿನ್ಹಾ, ಸನ್ಮಾನ್ಯ ಸಚಿವರು, ಟೆಲಿಕಮ್ಯೂನಿಕೇಶನ್ಸ್, ಭಾರತ ಸರ್ಕಾರರವರು ಪ್ರಶಸ್ತಿ ಪ್ರದಾನ ಮಾಡಿದರು.**

ಈ ಪ್ರಶಸ್ತಿಯನ್ನು Business World ಸಂಸ್ಥೆಯು ಸ್ಥಾಪಿಸಿದ್ದು, ಭಾರತದ ವ್ಯವಹಾರ ಮತ್ತು ವ್ಯಾಪಾರಗಳ ಬಗ್ಗೆ ಮ್ಯಾಗಜೀನ್ ಆಗಿರುತ್ತದೆ. ಈ ಪ್ರಶಸ್ತಿಯ ಉದ್ದೇಶ ದೇಶದ ವಿವಿಧ ಸಂಸ್ಥೆಗಳಲ್ಲಿನ ಉಪಕ್ರಮಗಳು ಹಾಗೂ ಅನ್ವೇಷಣೆಗಳನ್ನು ಗುರುತಿಸಿ ಗೌರವಿಸುವುದಾಗಿರುತ್ತದೆ. ಈ ಪ್ರಶಸ್ತಿ ಪುರಸ್ಕೃತ ಉಪಕ್ರಮಗಳನ್ನು ಅಳವಡಿಸಿಕೊಂಡು ದೇಶದ ನಗರಗಳನ್ನು ಸ್ಮಾರ್ಟ್‌ಸಿಟಿಯಾಗಿ ಅಭಿವೃದ್ಧಿಪಡಿಸುವ ಉದ್ದೇಶ ಹೊಂದಿರುತ್ತದೆ.

**ಸಹಿ/-**

**ಸಾರ್ವಜನಿಕ ಸಂಪರ್ಕಾಧಿಕಾರಿ**